# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103 ☎:0816-2255650,2273511 ಫ್ಯಾಕ್ಸ್:0816-2270719


ಸಂಖ್ಯೆ:ತು.ವಿ.:ಪ.ವಿ.:2025-26/705 ದಿನಾಂಕ:05.11.2025

## ಸುತ್ತೋಲೆ

ವಿಷಯ: 2025 ರ ಜುಲೈ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿಯ (UUCMS) ಪ್ರಥಮ ಮತ್ತು ತೃತೀಯ (ನವೀನ & ಪೂರಕ) ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಛಾಯಾ ಪ್ರತಿ / ಮರುಮೌಲ್ಯಮಾಪನದ ಮಾಹಿತಿ ಕುರಿತು.

* * * * * *

2025 ರ ಜುಲೈ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿಯ (UUCMS) ಪ್ರಥಮ ಮತ್ತು ತೃತೀಯ(ನವೀನ & ಪೂರಕ) ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಂಧಿಸಿದಂತೆ, ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಛಾಯಾ ಪ್ರತಿಗಳನ್ನು ಪಡೆಯಲು ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | | |
|---|---|---|
| 01. | ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 08.11.2025 |
| 02. | ವಿದ್ಯಾರ್ಥಿಗಳು ತಮ್ಮ ಯುಯುಸಿಎಂಎಸ್ ತಂತ್ರಾಂಶದ ಲಾಗಿನ್ ಮೂಲಕ ಛಾಯಾಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು | |
| 03. | ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ದಿನಾಂಕ | 11.11.2025 ರಿಂದ 13.11.2025 |
| 04. | ಯುಯುಸಿಎಂಎಸ್ ತಂತ್ರಾಂಶದ ಮೂಲಕ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ನಂತರ ಅಂದೇ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿಗೆ ತಮ್ಮ ಅರ್ಜಿಯ ಮಾಹಿತಿಯನ್ನು ಸಲ್ಲಿಸತಕ್ಕದ್ದು.<br>ವಿ.ಸೂ: ಕಾಲೇಜಿನ ಪ್ರಾಂಶುಪಾಲರು ಅಗತ್ಯ ಮಾಹಿತಿಗಳೊಂದಿಗೆ ಕ್ರೋಢೀಕರಿಸಿ, ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಿ "ಮಾನ್ಯ ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು" ಇವರಿಗೆ ಸಲ್ಲಿಸಲು ಕಡೆಯ ದಿನಾಂಕ | 14.11.2025 |

**ಶುಲ್ಕಗಳ ವಿವರ :**

1. **Photo copy for Per subject : Rs. 210-00**
2. **Revaluation for Per subject : Rs. 260-00**

**ಸೂಚನೆ :**

1. ವಿದ್ಯಾರ್ಥಿಗಳು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವಷ್ಟೇ ನಿಗದಿತ ಶುಲ್ಕವನ್ನು ಪಾವತಿಸಿ ನಿಗದಿತ ದಿನಾಂಕದೊಳಗೆ ಉತ್ತರ ಪುಸ್ತಕಗಳ ಛಾಯಾ ಪ್ರತಿಗಾಗಿ ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.
2. ಉತ್ತರ ಪುಸ್ತಕಗಳ ಛಾಯಾಪ್ರತಿಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಉತ್ತರ ಪುಸ್ತಕಗಳನ್ನು ಸ್ಕ್ಯಾನ್ ಮಾಡಿ ಯು.ಯು.ಸಿ.ಎಂ.ಎಸ್. ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವುದರಿಂದ, ಸಂಬಂಧಪಟ್ಟ ವಿದ್ಯಾರ್ಥಿಗಳು ಸದರಿ ಉತ್ತರ ಪುಸ್ತಕಗಳ ಛಾಯಾ ಪ್ರತಿಗಳನ್ನು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕವೇ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಯಾವುದೇ ಭೌತಿಕ ಪ್ರತಿಗಳನ್ನು ವಿತರಿಸಲಾಗುವುದಿಲ್ಲ.
3. ಛಾಲೆಂಜ್ ಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

ಪು.ತಿ.ನೋ.

**ಮರುಮೌಲ್ಯಮಾಪನದ ಮಾನದಂಡಗಳು :-**

1. ಮೊದಲನೇ ಮೌಲ್ಯಮಾಪನ ಹಾಗೂ ಮರು ಮೌಲ್ಯಮಾಪನದಲ್ಲಿ ನೀಡಲ್ಪಟ್ಟ ಅಂಕಗಳ ವ್ಯತ್ಯಾಸ ಶೇಕಡ 15 ಕ್ಕಿಂತ ಕಡಿಮೆ ಇದ್ದಲ್ಲಿ, ಅವೆರಡರಲ್ಲಿನ ನಡುವೆ ಅತಿ ಹೆಚ್ಚು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.
2. ಒಂದೊಮ್ಮೆ ವ್ಯತ್ಯಾಸ ಶೇಕಡ 15 ಹಾಗೂ ಅದಕ್ಕಿಂತ ಹೆಚ್ಚಿದ್ದಲ್ಲಿ ತೃತೀಯ ಮೌಲ್ಯಮಾಪನವಾಗುತ್ತದೆ. ಮೂರೂ ಮೌಲ್ಯಮಾಪನಗಳ ಪೈಕಿ ನಿಕಟವಾಗಿರುವ ಎರಡು ಮೌಲ್ಯಮಾಪನ ಅಂಕಗಳ ಸರಾಸರಿ ಅಂಕಗಳನ್ನು ಅಂತಿಮಗೊಳಿಸಲಾಗುವುದು.
3. ಒಂದೊಮ್ಮೆ ಮೂರು ಮೌಲ್ಯಮಾಪನಗಳಲ್ಲಿ ನೀಡಲಾದ ಅಂಕಗಳ ಪೈಕಿ ಯಾವುದಾದರೂ ಒಂದು ಮೌಲ್ಯಮಾಪನ ಅಂಕ ಉಳಿದೆರಡು ಮೌಲ್ಯಮಾಪನ ಅಂಕಗಳಿಂದ ಸಮಾನಾಂತರ ನಡುವಿನಲ್ಲಿದ್ದರೆ ಅಂತಹ ಸಂದರ್ಭದಲ್ಲಿ ಮೂರು ಅಂಕಗಳ ಪೈಕಿ ಹೆಚ್ಚು ಅಂಕಗಳಿರುವ ಎರಡು ಅಂಕಗಳ ಸರಾಸರಿ ತೆಗೆದು, ಸದರಿ ಅಂಕವನ್ನು ಅಂತಿಮಗೊಳಿಸಲಾಗುವುದು.

**ಮೇಲ್ಕಂಡ ಮಾನದಂಡಗಳನ್ವಯ ಮರುಮೌಲ್ಯಮಾಪನವನ್ನು ಮಾಡಲಾಗುವುದು. ಕೆಲವು ಸಂದರ್ಭಗಳಲ್ಲಿ ಮರುಮೌಲ್ಯಮಾಪನದ ನಂತರ ವಿದ್ಯಾರ್ಥಿಗಳ ಅಂಕಗಳು ಹೆಚ್ಚಾಗಬಹುದು ಅಥವಾ ಕಡಿಮೆಯೂ ಆಗುವ ಅವಕಾಶವಿರುತ್ತದೆ ಎಂಬ ಅಂಶವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಕಡ್ಡಾಯವಾಗಿ ತರುವುದು.**

5/11/2025

ಕುಲಸಚಿವರು (ಪರೀಕ್ಷಾಂಗ)
ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ

ಗೆ,

**ಪ್ರಾಂಶುಪಾಲರು, ಎಲ್ಲಾ ಸ್ನಾತಕ ಶಿಕ್ಷಣ (ಬಿ.ಇಡಿ.) ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು :**

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – **ಇಂದೇ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು**
2. ವಿಭಾಗದ ಮೇಲ್ವಿಚಾರಕರು, ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.– **ಇಂದೇ ಪ್ರಾಂಶುಪಾಲರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.**
3. ಕಛೇರಿ ಪ್ರತಿ